# IV ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ

**OS.No.627/2018**

**PW-2**

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 01-08-2023.**

ಮುಂದುವರೆದ ಪಾಟೀ ಸವಾಲು ಪ್ರತಿವಾದಿಪರ ವಕೀಲರು ಶ್ರೀಃ SGG ರವರಿಂದ.

ದಾವಾ ಸ್ವತ್ತು ಈ ಮೊದಲು ಖಾಲಿ ಜಾಗ ಇತ್ತು ನಮ್ಮ ಅಜ್ಜ ರಾಮನಾಥ ಗೋವಿಂದ ಪೂಜಾರಿರವರು ಮಾರುತಿ ಗುಡಿಯನ್ನು ಸದರಿ ಜಾಗದಲ್ಲಿ ಕಟ್ಟಿದ ಬಗ್ಗೆ ಪುರಾವೆ ಇರುವುದಿಲ್ಲ. ರಾಮನಾಥ ಗೋವಿಂದ ಪೂಜಾರಿರವರು ಖಾಲಿ ಜಾಗದ ಮಾಲೀಕರು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ಉತಾರ ಕೊಟ್ಟಿರುತ್ತೇವೆ ಎನ್ನುತ್ತಾರೆ ಸಾಕ್ಷಿಯು ಮುಂದುವರೆದು ಈಗ ಬೇರೆಯವರು ಕಬ್ಜ ಮಾಡಿರುತ್ತಾರೆ ಎನ್ನುತ್ತಾರೆ. ಎಷ್ಟು ವರ್ಷಗಳಿಂದ ಬೆರೆಯವರು ಕಬ್ಜ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಸಣ್ಣವನಿದ್ದಾಗಿನಿಂದ ಅವರ ಕಬ್ಜದಲ್ಲಿ ಇರುತ್ತದೆ. ನಾನು ಗುಡಿ ಮಾತ್ರ ಪೂಜೆ ಮಾಡುತ್ತೇನೆ ಗುಡಿಯ ಕಬ್ಜ ನಮ್ಮ ಬಳಿ ಇರುತ್ತದೆ ಎನ್ನುತ್ತಾರೆ ಸಾಕ್ಷಿಯು ಮುಂದುವರೆದು ಖಾಲಿ ಜಾಗ ಬೇರೆಯವರ ಕಬ್ಜದಲ್ಲಿರುತ್ತದೆ. ನೀವು ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವಾ ಎಂದರೆ ಸಾಕ್ಷಿ ನಮಗೆ ಯಾವುದೇ ತೊಂದರೆ ಬಂದಿರುವುದಿಲ್ಲ ನಾವು ಗುಡಿಯ ಪೂಜೆಯನ್ನು ಮಾಡುತ್ತಿದ್ದೆವು ಅದಕ್ಕೆ ಯಾವುದೇ ತೊಂದರೆ ಆಗುತ್ತಿರಲಿಲ್ಲ ಎನ್ನುತ್ತಾರೆ. ದಾವಾ ಸ್ವತ್ತು 30X20 ಗುಡಿ ಮಾತ್ರ ಇರುವುದಿಲ್ಲ ಖಾಲಿ ಜಾಗ ಸಹ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಗುಡಿ ಅಷ್ಟೇ ಇರುತ್ತದೆ ಎನ್ನುತ್ತಾರೆ. ಮಾರುತಿ ಗುಡಿ 30X20 ಅಳತೆ ಇದೆ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮಾರುತಿ ಗುಡಿಯನ್ನು ನನ್ನ ತಂದೆ ಯಾವಾಗ ಕಟ್ಟಿದರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ತಂದೆ ದಾವಾ ಸ್ವತ್ತಿನ ಮಾಲೀಕರು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆ 1991 ರಲ್ಲಿ ತೀರಿಕೊಂಡಿರುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ನಿಮ್ಮ ತಾಯಿಯವರಿಗೆ ದಾವಾಸ್ವತ್ತಿನ ಮಾಲಿಕೆ ಹಕ್ಕು ಬಂದ ಬಗ್ಗೆ ದಾಖಲೆ ಇರುವುದಿಲ್ಲ ಎಂದರೆ ಸರಿ. ಮೃತ್ಯುಪತ್ರ ಬರೆಯಲು ನಿಮ್ಮ ತಾಯಿಯವರ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿ ನಮ್ಮ ತಾಯಿಯವರು ನಮ್ಮ ತಂಗಿಯವರಿಗೆ ಬರೆದಿರುತ್ತಾರೆ ಎನ್ನುತ್ತಾರೆ. ನಾನು ಮತ್ತು ನನ್ನ ತಾಯಿ ಬೇರೆ ಬೇರೆ ಇರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿಯವರು ಯಾವ ದಿನಾಂಕ, ವರ್ಷದಂದು ಮೃತ್ಯು ಪತ್ರ ಮಾಡಿರುತ್ತಾರೆ ಎಂದು ಹೇಳಲಾಗುವುದಿಲ್ಲ. ನಾವು ಈಗ ವಾಸಿಸುತ್ತಿರುವ ಮನೆ ಸಿಟಿಎಸ್ ನಂ. 20/ಎ 1 ಎಂದರೆ ಸರಿ. ನಾನು ವಾಸಿಸುತ್ತಿರುವ ಮನೆಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧವಿರುವುದಿಲ್ಲ. ಮೃತ್ಯುಪತ್ರವನ್ನು ನನ್ನ ಸಹೋದರಿ ಮಾಧವಿ @ ಮಹದೇವಿಯವರ ಹೆಸರಿಗೆ ಬರೆದಿರುತ್ತಾರೆ. ನಿಪಿ. 1 ರಂತೆ ಮಹದೇವಿಯವರನ್ನು ಹೊರತುಪಡಿಸಿ ಉಳಿದವರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದು

ನಮೂದಿಸಿರುತ್ತಾರೆ ಎಂದರೆ ಸರಿ. ನಿಪಿ. 1 ರ ಆಧಾರದ ಮೇಲೆ ನ್ಯಾಯಲಯದಲ್ಲಿ ಪ್ರೊಬೇಟ್ ಆಗಲಿ ಅಥವಾ Declaration ಆಗಲಿ ಪಡೆದಿರುವುದಿಲ್ಲ.

2. ಪ್ರತಿವಾದಿಯವರು ಓ.ಎಸ.582/2018 ರಂತೆ ನಿಮ್ಮ ವಿರುದ್ಧ ಕಪಿಲೇಶ್ವರ ದೇವಸ್ಥನಕ್ಕೆ ಸಂಬಂಧಿಸಿದಂತೆ ದಾವೆ ಹೂಡಿದ್ದರು ಎಂದರೆ ಸರಿ. ನಾವು ಸಹ O.S.954/2018 ದಾವೆಯನ್ನು ಹೂಡಿದ್ದೆವು ಎಂದರೆ ಸರಿ. ಸದರಿ ದಾವೆ ನೀವು ಗೈರು ಹಾಜರಾದ ಕಾರಣ ವಜಾ ಆಗಿರುತ್ತದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ನಾವು ಬೇರೆ ದಾವೆಯನ್ನು ಹೂಡಿರುತ್ತೇವೆ ಎನ್ನುತ್ತಾರೆ. ಸದರಿ ದಾವೆಯನ್ನು ಪುನರ್ಸ್ಥಾಪಿಸಲು Misc. No.52/2021 ಅನ್ನು ಹೂಡಿರುತ್ತೇವೆ ಎಂದರೆ ಸರಿ. ನೀವು O.S.1246/2022 ರಂತೆ ಇನ್ನೊಂದು ದಾವೆಯನ್ನು ಹೂಡಿರುತ್ತೀರ ಎಂದರೆ ಸಾಕ್ಷಿ ಒಟ್ಟು 4 ದಾವೆಯನ್ನು ಹೂಡಿರುತ್ತೇವೆ ನಂಬರ್ ನೆನಪಿಲ್ಲ ಎನ್ನುತ್ತಾರೆ. ಖಡೇಬಜಾರ ಪೊಲೀಸ್ ಠಾಣೆಯಲ್ಲಿ ನಿಮ್ಮ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ನಾವು ಅವರ ಮೇಲೆ ಮಾಡಿರುತ್ತೇವೆ ಅವರು ನಮ್ಮ ಮೇಲೆ ಮಾಡಿರುತ್ತಾರೆ ಎನ್ನುತ್ತಾರೆ. ದಾವಾಸ್ವತ್ತಿನಲ್ಲಿ ಪೂಜೆ ಮಾಡುವ ಹಕ್ಕು ನಿಮಗೆ ಇದೆ ಎಂದು ನೀವು ಮಾಲೀಕತ್ವದ ಹಕ್ಕು ಪಡದಿರುವುದಿಲ್ಲ ಎಂದರೆ ಸಾಕ್ಷಿ 1997 ರಲ್ಲೇ ದಾವೆ ಹೂಡಿ ಪಡೆದಿರುತ್ತೇವೆ ಎನ್ನುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆ ನನ್ನ ಬಳಿ ಇರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವಾಗ ತಂಟೆ ತಕರಾರು ಆಗಿರುತ್ತದೆ ಎಂದು ಹೇಳಲಾಗುವುದಿಲ್ಲ. ದಾವಾ ಸ್ವತ್ತು ನಿಮ್ಮ ಸ್ವಾಧೀನದಲ್ಲಿದೆ ಮತ್ತು ಮಾಲೀಕತ್ವದಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೀರ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ. ಸರಿಯಿದೆ.

ಸಹಿ/-

4 ನೇ ಹೆಚ್ಚುವರಿ ಸಿವಿಲ್ ನ್ಯಾ . ಹಾಗೂ

ಜೆ ಎಮ್ ಎಫ್ ಸಿ, ಬೆಳಗಾವಿ.